ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ,ರೋಣ
ಸಿ ಸಿ ನಂಬರ : 658/2021
CW- 9 PW-4

| | | |
|---|---|---|
| ಹೆಸರು | : | ಸುರೇಶ ಗೊಂ |
| ತಂದೆ ಹೆಸರು | : | ಹನುಮಂತಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಎ.ಎಸ್.ಐ., ಗಜೇಂದ್ರಗಡ |
| ವಾಸಸ್ಥಳ | : | ಗಜೇಂದ್ರಗಡ. |

---

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ
16−06−2025 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾನು ಸುಮಾರು 8 ತಿಂಗಳಿನಿಂದ ಗಜೇಂದ್ರಗಡ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 07-05-2020 ರಂದು ನಾನು ಎಸ್.ಎಚ್. ಓ, ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 2.30 ಘಂಟೆ ಸುಮಾರಿಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರು ನೀಡಿದ್ದು, ನಂತರ ದಿಃ 08-05-2020 ರಂದು ಎನ್.ಸಿ.ನಂ.28/2020 ರಲ್ಲಿ ಮಾನ್ಯ ನ್ಯಾಯಾಲಯದಿಂದ ಅನುಮತಿ ಬಂದ ನಂತರ ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ಸಂಖ್ಯೆ: 76/2020 ರಂತೆ ಭಾ.ದಂ.ಸ. ಕಲಂ 504 ಮತ್ತು 506 ರಡಿಯಲ್ಲಿ ಪ್ರಕರಣ ದಾಖಲಿಸಿ, ಮೂಲ ದೂರು ಮತ್ತು ಎಫ್ಐ.ಆರ್,ಅನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಮುಂಜಾನೆ 9.30 ಘಂಟೆಯಿಂದ 10.30 ಘಂಟೆಯವರೆಗೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿದ್ದ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿದ್ದೇನೆ. ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-10 ರವರಿಗೆ ಹಸ್ತಾಂತರಿಸಿದ್ದೇನೆ. ಸಾಕ್ಷಿಯು ಮೂಲ ಎಫ್.ಐ.ಆರ್. ಅನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-3 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮೂಲ ದೂರನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-4 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು 4 ಎ ಮತ್ತು 4 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-2 ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಅದನ್ನು ನಿಪಿ-1 ಸಿ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಶ್ರೀ. ಬಿ.ಎಮ್.ಎಸ್.  ಆರೋಪಿಯ ಪರ ವಕೀಲರಿಂದಃ</u>**

ಠಾಣೆಯ ಅಂಕೆ ಸಂಖ್ಯೆಗೋಸ್ಕರ ಚಾಸಾ-1 ರವರು ನೀಡಿದ ದೂರಿನ ಆಧಾರದ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಹಾಗೂ ಪಂಚರ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ , ಪಂಚರ ಸಹಿಗಳನ್ನು ಠಾಣೆಯಲ್ಲಿಯೇ ಪಡೆದಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಅದೆ.

(ಹುಲುಗಪ್ಪ. ಡಿ )
ಪ್ರಧಾನ  ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ.